

ಹೇಳಿ ನಮ್ದು ಬೇಟಿಗೆ ಸಹಾಯ್ ಮಾಡಾಕೆ ಕೇಳಿಕೊಂಡಿದ್ದೇನೆ' ಎಂದು ಭರವಸೆ ಕೊಡುತ್ತಿದ್ದ. ಗುಜರಿ ಕೆಲಸದಿಂದ ಬೆಳೆದ ನೂರಲ್ ಹಸನ್ ಕನಸು ಕಟ್ಟುತ್ತಿದ್ದ. ಅವುಗಳನ್ನು ಕ್ರಿಯೆಗಿಳಿಸಲು ದುಡಿಯುತ್ತಿದ್ದ.

ಆದರೆ ನೂರಲ್ ಹಸನ್ ಯಾವ ಕೊರಗು ತನ್ನ ಚಾವಣಿಯೊಳಗೆ ಸುಳಿಯಬಾರದೆಂದು ನಿಗಾ ವಹಿಸಿದ್ದನೊ ಅದೇ ಕೊರಗು ಅವನ ದುರ್ಮರಣದಿಂದ ಸಂಸಾರವನ್ನು ತಳಹರಿದ ದೋಣಿಯಂತಾಗಿಸಿಬಿಟ್ಟಿತು.

ಇದು ಹದಿನೈದು ದಿನಗಳ ಹಿಂದಿನ ಘಟನೆ. ಸುಲೇಮಾನ್‌ಪಾಳ್ಯದಲ್ಲಿ ಐದು ಜನರಿಗೆ ಕೊರೊನಾ ಸೋಂಕು ತಗಲಿದ್ದರೂ ಅವರು ಹೇಳಿಕೊಳ್ಳದೆ, ಕ್ವಾರಂಟೈನ್‌ಗೂ ಒಳಗಾಗದೆ ದ್ವೇಷದಿಂದ ರೋಗ ಹಬ್ಬಿಸಿಬಿಟ್ಟಿದ್ದಾರೆ ಎಂಬ ಸುದ್ದಿ ಹರಡಿ ಗದ್ದಲಕ್ಕೆ ತಿರುಗಿಬಿಟ್ಟಿತು. ಅದೇ ಸಮಯದಲ್ಲಿ ನೂರಲ್ ಹಸನ್ ಕೆಲಸ ಮುಗಿಸಿ ಮನೆಗೆ ವಾಪಸಾಗುತ್ತಿದ್ದ. ಆ ಕಡೆಯಿಂದ ದೊಣ್ಣೆ ಬೀಸಿಕೊಂಡು ಬಂದ ಪೊಲೀಸರ ಏಟಿನಿಂದ ತಪ್ಪಿಸಿಕೊಳ್ಳಲೆಂದು ನೆಗೆದ ರಭಸಕ್ಕೆ ಆಯತಪ್ಪಿ ಕೆಳಗೆ ಬಿದ್ದುಬಿಟ್ಟ. ಇವನು ಬಿದ್ದದ್ದಕ್ಕೂ ಆ ಕಡೆಯಿಂದ ಒಂದು ಗುಂಪು ನುಗ್ಗಿ ಬಂದದ್ದಕ್ಕೂ ತಾಳೆ ಆಯಿತು. ಅದೇನು ಆವೇಶವೋ ಬಿದ್ದವನಿಗೆ ಒಬ್ಬ ಜಾಡಿಸಿ ಒದ್ದ. ಆ ಒದೆತ ಗುಪ್ತಾಂಗಕ್ಕೆ ಬಿದ್ದು ಮಿಲಿಮಿಲಿಗುಟ್ಟಿ ಉಸಿರುಬಿಟ್ಟ. ನೂರಲ್‌ಹಸನ್ ಮೈಮೇಲೆ ಯಾವುದೇ ಗಾಯ, ರಕ್ತದ ಕಲೆ ಇರಲಿಲ್ಲ. ಡಾಕ್ಟರು ಮ್ಯಾಸೀವ್ ಹಾರ್ಟ್ ಅಟ್ಯಾಕ್‌ನಿಂದ ಸತ್ತಿದ್ದಾನೆ ಎಂದುಬಿಟ್ಟರು. ಹಾಗಾಗಿ ಸರ್ಕಾರದಿಂದ ಸಿಗಬಹುದಿದ್ದ ಯಾವ ಸೌಲಭ್ಯವೂ ಸಿಗಲಿಲ್ಲ. ಅಂದು ಮಾಲೀಕರಿಂದ ಸಂಬಳ ಪಡೆದು ತರುತ್ತಿದ್ದನೋ ಇಲ್ಲವೋ ಅವನ ಮೈಮೇಲಿನ ಶರ್ಟು, ಪ್ಯಾಂಟು ಬಿಚ್ಚಿಕೊಟ್ಟಾಗ ಜೇಬುಗಳು ಖಾಲಿ ಇದ್ದವು. ಅವನ ಜೊತೆಗಿದ್ದ ಮೊಬೈಲೂ ಇಲ್ಲವಾಗಿತ್ತು. ಸದಾ ಲೆಕ್ಕ, ಮಾಹಿತಿ ಬರೆಯುತ್ತಿದ್ದ ಪಾಕೆಟ್‌ಡೈರಿಯೂ ಕಾಣೆಯಾಗಿತ್ತು.

ಅಪ್ಪನೊಟ್ಟಿಗೆ ಯಾವುದೂ ಸಿಗಲಿಲ್ಲ. ಅಪ್ಪನಿಲ್ಲದ ಮನೆ ಮೇಟಿ ಇಲ್ಲದ ಗಾಣದಂತಾಯಿತು.

ಹಣ ಇಲ್ಲ. ಹಣವಿಲ್ಲದೆ ದಿನಸಿ ತರುವಂತಿಲ್ಲ. ಹಾಲಿನವರ ಬಾಕಿ ತೀರಿಸುವಂತಿಲ್ಲ. ಲೈಟ್‌ಬಿಲ್ಲು ಕಟ್ಟುವಂತಿಲ್ಲ. ರಾಯಚೂರಿನಿಂದ ಸಂಗೀತ ಕಲಿಯಲು ಬಂದು ಹೂಡಿಯಲ್ಲಿರುವ ದೊಡ್ಡಪ್ಪನ ಮಗ ಖಾಸಿಂ ಅಣ್ಣನ ಸಂಪರ್ಕ ಮಾಡಲಾಗುತ್ತಿಲ್ಲ. ತಲೆಸುತ್ತು, ಕೈಕಾಲುಗಳ ಬಳಲಿಕೆಯಿಂದ ಮಲಗಿರುವ ಅವ್ವನನ್ನು ಡಾಕ್ಟರ ಬಳಿ ಕರೆದೊಯ್ಯಲು ತೋಚುತ್ತಿಲ್ಲ. 'ಬೇಟಿ ನಿನ್ನಾ ನಮ್ದು ಮಾಲೀಕ್ ಮನ್ಗೆ ಕರ್ಕೊಂಡು ಹೋಗಿ ಆ ಬೇಟಾ ಪುಟ್ಟಕ್ಕನಿಗೆ ಪರಿಚಯ ಮಾಡಿಸ್ತೀನಿ' ಅಂದಿದ್ದ ಅಪ್ಪನ ಮಾತೂ ಇಂಗಿಹೋಯಿತು. ಅಪ್ಪನ ಬಯಕೆಯಂತೆ ಕಷ್ಟಪಟ್ಟು ಸಿದ್ಧವಾಗಿದ್ದ ಪರೀಕ್ಷೆಯೂ ನಿಂತುಹೋಯಿತು. ಹೊರಗೆ ಹೋಗುವಂತಿಲ್ಲ, ತ್ರಾಣ ಕೂಡಿಸಿಕೊಳ್ಳುವಂತಿಲ್ಲ. ಎಲ್ಲವೂ ಏಕದಂ ಖಾಲಿ, ಖಾಲಿ! ಅಪ್ಪ ಇಲ್ಲದ ಮನೆ ಬೆಳಕು ನಂದಿಹೋದ ಕತ್ತಲೆಯ ಗವಿಯಾಯಿತು. ಬರೀ ಶೂನ್ಯ! ಶೂನ್ಯದಲ್ಲಿ ಸೃಷ್ಟಿ ಮಾಡುವುದು ಅದು ಅನುಭಾವಿಗಳ ಮಾತು. ಆದರೆ ಏನೂ ಇಲ್ಲದೆ ಅನುಭವಿಸುವುದು ಸಾವಲ್ಲದ ಸಾವು! ಅಪ್ಪ ಬಿತ್ತಿದ ಕನಸುಗಳನ್ನು ಬೆಳೆಯಲು ಹತಾರಗಳೇ ಇಲ್ಲ!

ಜರೀನಾಗೆ ಎಂದೂ ಇಂಥ ಯೋಚನೆಗಳು ಸುಳಿದಿರಲಿಲ್ಲ. ಈಗ ಇಂತೆಲ್ಲ ಚಿಂತೆಗಳು ಮುತ್ತಿ ದಿಕ್ಕುಗಾಣದಂತಾಯಿತು. ಈ ಬಗೆಯ ಸರಣಿ ಚಿಂತೆಗಳು, ಇವುಗಳನ್ನು ಬಗೆಹರಿಸಲಿದ್ದ ಅಪ್ಪ ಇಲ್ಲವಾದ ಶೂನ್ಯ ಮತ್ತೆ ಮತ್ತೆ ನೆನಪಾಗಿ ಸಂಕಟದ ಕುದಿ ಒತ್ತರಿಸಿ ಬಂತು. ನಡು ರಸ್ತೆಯಲ್ಲಿದ್ದೇನೆ, ಯಾರಾದರೂ ನೋಡಿಯಾರು ಎಂಬ ಭಾವವೆಲ್ಲ